# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ 121/2019

| | | |
|---|---|---|
| ಸಾಕ್ಷಿದಾರರ ಹೆಸರು | : ವೀರಭದ್ರಪ್ಪ | ಪಿಡಬ್ಲ್ಯೂ ಃ 3 |
| ತಂದೆಯ / ಗಂಡನ ಹೆಸರು | : ಲೇಃ ಚಿಂದಲಗರೇರು | ಪಿಡಬ್ಲ್ಯೂ ಃ 3 |
| ವಯಸ್ಸು | : 61 ವರ್ಷ | |
| ಉದ್ಯೋಗ | : ಜೆ ಎಸ್ ಎಸ್ ಹಾಸ್ಟೆಲ್ ನಲ್ಲಿ ಅಡುಗೆ ಕೆಲಸ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 02.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ಮೈಸೂರಿನ ಕಾವೇರಿನಗರದಲ್ಲಿ ಕಳೆದ 30 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಈ ಪ್ರಕರಣದ ಚಾ,ಸಾ. 1, 2, 4 ಮತ್ತು 5 ರವರು ಗೊತ್ತು. ಈಗ್ಗೆ 5 ವರ್ಷ 4 ತಿಂಗಳ ಹಿಂದೆ ನನ್ನನ್ನು ಮೇಟಗಳ್ಳಿ ಪೋಲೀಸರು ರಾತ್ರಿ 10.30 ರಿಂದ 11.00 ಗಂಟೆ ಸಮಯಕ್ಕೆ ಕಾವೇರಿ ನಗರದ ಚಾ,ಸಾ. 2 ರವರ ಅಂಗಡಿಯ ಬಳಿಗೆ ಕರೆಯಿಸಿದ್ದರು. ಅಲ್ಲಿಗೆ ಚಾ,ಸಾ. 4 ಮತ್ತು 5 ರವರು ಸಹ ಬಂದಿದ್ದರು. ಅಲ್ಲಿ ಕಾವೇರಿ ನಗರದವರು ಜಾಗವನ್ನು ಪೋಲೀಸರಿಗೆ ತೋರಿಸಿದ್ದರು. ಅಲ್ಲಿ ಪೋಲೀಸರು ಮಹಜರ್ ಮಾಡಿದರು. ಬರವಣಿಗೆ ಮಾಡಿ ನನ್ನ ಸಹಿಯನ್ನು ಪಡೆದರು. ಈಗ ತೋರಿಸುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 13.09.2018 ರಂದು ಮಾಡಿದ ಸ್ಥಳ ಮಹಜರ್ ಆಗಿದ್ದು , ಅದನ್ನು ಈಗಾಗಲೇ ನಿಪಿ 3 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ

ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 3(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಜಗದೀಶ ಅಂದರೆ ಚಾ,ಸಾ. 1 ಆ ಸ್ಥಳದಲ್ಲೇ ಇದ್ದ. ಆತನ ಬಿಳಿಯ ಬಟ್ಟೆ ರಕ್ತವಾಗಿತ್ತು. ಚಾ,ಸಾ. 2 ರವರ ವಾಚ್ , ಚಪ್ಪಲಿ ಇದ್ದವು. ರಕ್ತ ಸಹಿತ ಮಣ್ಣು, ರಕ್ತ ರಹಿತ ಮಣ್ಣು , ಇವುಗಳೆಲ್ಲವನ್ನು ಪೋಲೀಸರು ಒಂದು ಚಮಚದಿಂದ ತೆಗೆದುಕೊಂಡರು. ಅವುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಅಲ್ಲಿ ಒಂದು ಆಟೋ ಇತ್ತು. ಅದರ ಮುಂದಿನ ಗಾಜು ಒಡೆದಿತ್ತು. ಅದನ್ನೂ ಸಹ ಪೋಲೀಸರು ತೆಗೆದುಕೊಂಡರು. ಈ ಮಹಜರ್ ನ್ನು ರಾತ್ರಿ 10.30 ಯಿಂದ 11.30 ತನಕ ಮಾಡಿದರು. ಮಹಜರ್ ನ ಬರವಣಿಗೆಯನ್ನು ಅಲ್ಲಿದ್ದ ಡೂಂ ಲೈಟ್ ನ ಬೆಳಕಿನಿಂದ ಬರೆದರು.

2. ಇಂದು ನ್ಯಾಯಾಲಯದ ಮುಂದೆ ನಾನು ಬಿಳಿಯ ಟೀ ಶರ್ಟ , ವಾಚು, ಚಪ್ಪಲಿ ,ರಕ್ತ ಸಹಿತ ಮಣ್ಣು , ರಕ್ತ ರಹಿತ ಮಣ್ಣು , ಚಮಚ ಇವುಗಳನ್ನು ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ಎಂ ಒ 3 ರಿಂದ 8 ಎಂದು ಗುರುತಿಸಲಾಗಿದೆ. ಅವುಗಳ ಮೇಲೆ ಇರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ ಎಂದು ಸಾಕ್ಷಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದುರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಞ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.